

ಪಾಸ್ ಆದಮೇಲೆ, ಈವನಿಂಗ್ ಕಾಲೇಜಿನಲ್ಲಿ ಓದು ಎಂದು ಪಂಚವಾರ್ಷಿಕ, ಸಪ್ತವಾರ್ಷಿಕ ಯೋಜನೆಯನ್ನೆಲ್ಲಾ ಮಾಡಿದ್ದರು.

ಹೆಚ್ಚು ಹೊತ್ತು ಕಾಣದಿದ್ದರೆ ಹಿರಿಯರಿಗೆ ಅನುಮಾನ ಬರಬಹುದು ಎಂದು ಮೆಲ್ಲಗೆ ಒಬ್ಬೊಬ್ಬರೇ ಹರಿಕಥೆ ನಡೆಯುತ್ತಿದ್ದ ಜಾಗದ ಬಳಿ ಬಂದರು. ಆಗ ದಾಸರು ಕತೆಯ ಕೊನೆಯ ಹಂತಕ್ಕೆ ಬಂದಿದ್ದರು. 'ಧರ್ಮರಾಯ ಅಭಿಮನ್ಯುವಿನ ಮಗ ಪರೀಕ್ಷಿತನಿಗೆ ರಾಜ್ಯಭಾರ ನೀಡಿ, ಎಲ್ಲರೂ ಮಹಾಪ್ರಸ್ಥಾನಕ್ಕೆ ಸಜ್ಜಾಗಿ ಹೊರಟಿದ್ದಾರೆ, ಎಲ್ಲರೂ ಹಿಮಾಲಯದ ಕಡೆಗೆ ಹೋಗುತ್ತಿರುವಾಗ ಪಾಂಚಾಲಿ ಬಳಲಿ ಬೀಳುತ್ತಾಳೆ. ಮೊದಲೇ ಚರ್ಚಿಸಿದಂತೆ ಯಾರು ನಿಂತರೂ, ಬಳಲಿ ಬಿದ್ದರೂ, ಪ್ರಾಣವೇ ಹೋದರೂ ಹಿಂದೆ ತಿರುಗಿ ನೋಡುವಂತಿಲ್ಲ. ಹಿಂದೆ ತಿರುಗಿ ನೋಡುವುದು, ಒಬ್ಬರಿಗೊಬ್ಬರು ಆಸರೆ ಆಗುವುದು ಮೋಹದ ಸಂಕೇತವಾದ್ದರಿಂದ ಎಲ್ಲ ಮೋಹಗಳನ್ನು ಬಿಟ್ಟವರು ಮಾತ್ರ ಸ್ವರ್ಗಾರೋಹಣ ಮಾಡಬಹುದು ಎಂದು ತೀರ್ಮಾನವಾಗಿತ್ತು. ದ್ರೌಪದಿ ಹಿಂದೆ ಬಿದ್ದದ್ದು ಯಾರಿಗೂ ತಿಳಿಯುವಂತೆಯೂ ಇರಲಿಲ್ಲ.

ಆಗ ತಿಮಿರಾಸುರ ಎಂಬ ರಕ್ಕಸ ದ್ರೌಪದಿಯನ್ನ ಹಿಂಸಿಸಲು ಶುರುಮಾಡುತ್ತಾನೆ. ತನ್ನನ್ನು ಎಲ್ಲ ಕಾಲದಲ್ಲೂ ಕಾಪಾಡಿದ ಕೃಷ್ಣನನ್ನು ಗೋವಿಂದ ಕಾಪಾಡು ಎಂದು ಮೊರೆಯಿಡುತ್ತಾಳೆ. ಗೋವಿಂದನ ದರ್ಶನವಾಗಿ ನೀನು ಸ್ವತಃ ದೇವಿ ಸ್ವರೂಪಳು, ನಿನ್ನಲ್ಲೇ ಶಕ್ತಿ ಇದ್ದಾಳೆ. ಆ ರಕ್ಕಸನನ್ನು ನೀನೇ ಸಂಹಾರ ಮಾಡು ಎಂದು ಹೇಳುತ್ತಾನೆ.

ಶಕ್ತಿ ಸ್ವರೂಪಿಣಿಯಾದ ದ್ರೌಪದಿ ದೇವಿ ತನ್ನ ತಲೆಯಿಂದ ಯಜಮಾನರುಗಳನ್ನು, ಹಣೆಯಿಂದ ಗಣಾಚಾರ್ಯರನ್ನು, ಕಿವಿಯಿಂದ ಗೌಡರುಗಳನ್ನು, ಬಾಯಿಂದ ಗಂಟೆ ಪೂಜಾರಿಗಳನ್ನು, ತೋಳುಗಳಿಂದ ವೀರ ಕುಮಾರರನ್ನು ಸೃಷ್ಟಿಸುತ್ತಾಳೆ. ಘೋರ ಯುದ್ಧವಾಗಿ ಆ ತಿಮಿರಾಸುರನನ್ನು ಸಂಹಾರ ಮಾಡಿ ಅವನ ರಕ್ತ ಕುಡಿಯುತ್ತಾಳೆ. ತಾನು ಬಂದ ಕೆಲಸವಾಯಿತು ಇನ್ನು ಹೊರಡುವೆನು ಎಂದಾಗ ಅವಳೇ ಸೃಷ್ಟಿಸಿದ ಮಕ್ಕಳೆಲ್ಲ ಗೋಳಾಡುತ್ತಿರಲು, ತಾನು ವರ್ಷದಲ್ಲಿ ಮೂರು ದಿನ ನಿಮ್ಮ ಜೊತೆಗೆ ಇರುತ್ತೇನೆ ಎಂದು ವರ ಕೊಡುತ್ತಾಳೆ. ಅಂದಿನಿಂದ ಇಂದಿನವರೆಗೂ ಆ ಮಹಾತಾಯಿ, ಆ ಶಕ್ತಿರೂಪಿಣಿ, ಚೈತ್ರಮಾಸದಲ್ಲಿ ತನ್ನ ಮಕ್ಕಳನ್ನು ನೋಡಲು ಧರೆಗಿಳಿದು ಈ ಕಲ್ಯಾಣಪುರಿಗೆ ಬರುತ್ತಾಳೆ. ಆ ದ್ರೌಪದಮ್ಮನನ್ನು ಬರಮಾಡಿಕೊಂಡು ನಾವು ಕರಗ ಉತ್ಸವ ಆಚರಿಸುತ್ತೇವೆ' ಎಂಬ ವಿವರಗಳನ್ನು ಕೊಡುತ್ತಿದ್ದರು. ಈ ವಿವರಗಳು ಚಂಪಾ ಮನಸ್ಸಿನಲ್ಲಿ ನಿಂತುಬಿಟ್ಟವು.

ದಿನಗಳು ಉರುಳುತ್ತಿದ್ದವು. ಇವರ ಪಲಾಯನಕ್ಕೆ ಮಾಡುತ್ತಿರುವ ಸಿದ್ಧತೆಯ ಚಟುವಟಿಕೆ ಹೆಚ್ಚಿದ್ದು ಯಾರಿಗೂ ತಿಳಿಯಲಿಲ್ಲ. ಮೂವರೂ ದುಡ್ಡು ಸೇರಿಸುವುದಕ್ಕೆ ತಮ್ಮೆಲ್ಲ ಪ್ರಯತ್ನ ಮಾಡುತ್ತಿದ್ದರು. ಕೂಡಿಸಿದ ಹಣ ತಮ್ಮ ತಮ್ಮ ಬಳಿ ಇಟ್ಟುಕೊಂಡಿದ್ದರು. ಮಂಜ ಒಂದು ದಿನ, 'ಇಷ್ಟು ಹಣ ಕೈಯಲ್ಲಿ ಇಟ್ಟುಕೊಳ್ಳುವುದು ಅಪಾಯ. ಕೈ ಖರ್ಚಿಗೆ ಹತ್ತು ಸಾವಿರ ಇಟ್ಟುಕೊಂಡು, ಮಿಕ್ಕಿದ್ದೆಲ್ಲ ಬಾಲನ ಬ್ಯಾಂಕ್ ಅಕೌಂಟಿನಲ್ಲಿ ಇಡೋಣ' ಎಂದು ಸಲಹೆ ಕೊಟ್ಟ. ಚಂಪಾಳಿಗೆ ಅದು